೧. ॥ ಗಜವದನ ಬೇಡುವೆ ॥

ಗಜವದನ ಬೇಡುವೆ, ಗೌರಿ ತನಯ
ತ್ರಿಜಗ ವಂದಿತನೇ ಸುಜನರ ಪೊರೆವನೆ

ಪಾಶಾಂಕುಶಧರ ಪರಮ ಪವಿತ್ರ
ಮೂಷಿಕವಾಹನ ಮುನಿಜನ ಪ್ರೇಮ
ಮೋದದಿ ನಿನ್ನಯ ಪಾದವ ತೋರೋ

ಸಾಧು ವಂದಿತನೆ ಆದರದಿಂದಲಿ
ಸರಸಿಜನಾಭ ಶ್ರೀ ಪುರಂದರ ವಿಠಲ
ನಿರುತ ನೆನೆಯುವಂತೆ ದಯ ಮಾಡೋ

೨. ॥ ನಾ ನಿನ್ನ ಧ್ಯಾನದೊಳಿರಲು ಸದಾ ॥

ನಾ ನಿನ್ನ ಧ್ಯಾನದೊಳಿರಲು ಸದಾ
ಮಿಕ್ಕ ಹೀನ ಮಾನವರೇನು ಮಾಡಬಲ್ಲರೋ ರಂಗ

ಧೂಳಲಿ ಕುದುರೆ ವೈಯ್ಯಾರದಿ ಕುಣಿಯಲು
ಧೂಳು ರವಿಯ ಮೇಲೆ ಮುಸುಕುವದೆ
ತಾಳಿದವರಿಗೆ ವಿರುದ್ಧ ಲೋಕದೊಳುಂಟೆ
ಗಾಳಿಗೆ ಗಿರಿಯು ತಾ ಅಲ್ಲಾಡುವುದೆ

ಮತ್ಸರಿಸುವರೆಲ್ಲ ಕೂಡಿ ಮಾಡುವುದೇನು
ಅಚ್ಯುತ ನಿನದೊಂದು ದಯೆಯಿರಲಿ
ವಾತ್ಸಲ್ಯ ಬಿಡದಿರು ನಿನ್ನ ನಂಬಿದೆ ದೇವ
ಕಿಚ್ಚಿಗೆ ಇರುವೆ ಮುತ್ತುವುದೆ ಕೇಳೆಲೊ ರಂಗ

ಕನ್ನಡಿಯೊಳಗಿನ ಗಂಟು ಕಂಡು ಕಳ್ಳ
ಕನ್ನವಿಕ್ಕಲವನ ವಶವಹುದೇ
ಪನ್ನಗಶಯನ ಶ್ರೀ ಪುರಂದರ ವಿಠಲನೆ
ಚಿನ್ನಕ್ಕೆ ಪುಟವಿಕ್ಕಿದಂತಹುದೋ ರಂಗ